Sri H. SIDDAVEERAPPA.—Details are not readily available with me, but there is a report that there was a disease . . .

ಶ್ರೀ ಜಿ. ಎಸ್. ಬೊಮ್ಮೇಗೌಡ.—ಇದು 5 ಲಕ್ಷ ಜನಕ್ಕೆ ಸಂಬಂಧಪಟ್ಟ ಪ್ರಶ್ನೆ. ಇಷ್ಟು ಕಬ್ಬು ಜಾಸ್ತಿ ಬರಬೇಕಾದರೆ, ಆಡಳಿತವರ್ಗದವರು ಒಪ್ಪಿಗೆ ಕಬ್ಬನ್ನು ಎಷ್ಟು ತೆಗೆದುಕೊಳ್ಳಬೇಕಾಗಿತ್ತೋ ಅದಕ್ಕೆ ಅವಕಾಶಕೊಡದೆ, ಒಪ್ಪಿಗೆ ಇಲ್ಲದ ಕಬ್ಬನ್ನು ಬರ ಮಾಡಿಕೊಂಡಿದ್ದು ಆಡಳಿತವರ್ಗದ ದಕ್ಷತೆಯ ಅಭಾವ ದಿಂದ ಎಂದು ಹೇಳಬಹುದಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ದಕ್ಷತೆಯ ಅಭಾವ ದಿಂದ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವು ವೇಳೆ ಆ ರೀತಿ ಒಪ್ಪಿಗೆ ಕೊಡದೆ ಕಬ್ಬು ಬರುತ್ತದೆ. ಬೆಲ್ಲದ ಬೆಲೆ ಸಕ್ಕರೆ ಬೆಲೆಗಿಂತ ಕಡಮೆಯಿರುವುದರಿಂದ ಆ ರೀತಿ ಆಗುತ್ತದೆ. ಈ ಸಾರಿ crushing season ಏಪ್ರಿಲ್‌ವರಗೂ ಇರುತ್ತದೆ.

Mr. SPEAKER.—We have got three more questions. Therefore it cannot be discussed within two or three minutes. You can take another occasion to discuss this question.

Bangalore City Bus Service (nationalisation).

Q.—645. Sri S. SIDDAPPA (Magadi).—

Will the Government be pleased to state :—

whether they would take over the Bangalore City Bus Service under their management ?

A.— Sri H. SIDDAVEERAPPA (Minister for Home and Industries):—

The matter is under consideration.

ಶ್ರೀ ಎಸ್. ಸಿದ್ದಪ್ಪ.—ಬೆಂಗಳೂರು ಸಿಟಿ ಬಸ್ ಸರ್ವಿಸನ್ನು ರಾಷ್ಟ್ರೀಕರಣ ಮಾಡುವ ಪ್ರಶ್ನೆಗೆ ಉತ್ತರವಾಗಿ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಈ ರೀತಿ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳುತ್ತಿರುವುದು ಇದೇ ಮೂರನೆಯ ಸಾರಿ ಅಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಇದು 5ನೆಯ ಸಾರಿ.

ಶ್ರೀ ಎಸ್. ಸಿದ್ದಪ್ಪ.—ರಾಷ್ಟ್ರೀಕರಣ ಮಾಡುವು ದರಿಂದ ಹೆಚ್ಚಿಗೆ ರಾಭ ಸರ್ಕಾರಕ್ಕೆ ಬರುತ್ತದೆಂಬು ದನ್ನು ತಾವು ಮನಗಂಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಲಾಭದ ದೃಷ್ಟಿಯಿಂದ ನೋಡುತ್ತಿಲ್ಲ. ಜನಗಳಿಗೆ ಹೆಚ್ಚಿಗೆ ಅನುಕೂಲವನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ ನೋಡುತ್ತಿದ್ದೇವೆ.

House Building grants to Harijans in Kolar District.

Q.—544. Sri G. PAPANNA (Sidlaghatta—Chickballapur).—

Will the Government be pleased to state :—

(*a*) the extent of amount granted during each year for the Harijans in Kolar District to construct their dwelling houses for the last three years ;

(*b*) out of the said sum, the extent of amount distributed as a special grant and also as ordinary grant for each taluk in each year ?

A.—Sri K. HANUMANTHAIYA (Chief Minister).—

		Rs.
(*a*) (1)	1951-52 ...	2,99,500
(2)	1952-53 ...	2,62,000
(3)	1953-54 ...	1,68,700

(*b*) Please see Statement appended below.